## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 15 ಶಿವಾನಿ: 2012

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ ಬೆಂಗಳೂರು,
ದಿನಾಂಕ: 02-07-2012.

## ಸು ತ್ತೋ ಲೆ

ಇತ್ತೀಚೆಗೆ ಕೊಪ್ಪಳ ಜಿಲ್ಲೆಯಲ್ಲಿ ಸರ್ಕಾರಿ ವಾಹನ ವಿಮಾ ರಕ್ಷೆ ಇಲ್ಲದೆ ಅಪಘಾತಕ್ಕೆ ಒಳಗಾಗಿದ್ದು, ಇದರಿಂದಾಗಿ ವಾಹನ ಅಪಘಾತ ಪರಿಹಾರ ಮಂಡಳಿ ಎಮ್.ವಿ.ಸಿ. ಪ್ರಕರಣದಲ್ಲಿ ಪರಿಹಾರವನ್ನು ನೀಡುವ ಬಗ್ಗೆ ಆದೇಶ ಹೊರಡಿಸಿದ್ದು, ಅದನ್ನು ಸರ್ಕಾರವೇ ಪಾವತಿಸಬೇಕಾದ ಪ್ರಸಂಗ ಬಂದಿರುತ್ತದೆ. ಸರ್ಕಾರದ ಎಲ್ಲ ಇಲಾಖೆಗಳಲ್ಲಿರುವ ವಾಹನಗಳಿಗೆ ವಿಮಾ ರಕ್ಷೆಯನ್ನು ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ಮುಖಾಂತರ ಪಡೆದುಕೊಳ್ಳಬೇಕೆಂದು ಕಾಲ ಕಾಲಕ್ಕೆ ಸೂಚನೆಯನ್ನು ನೀಡಲಾಗಿದ್ದು, ಅದರಂತೆ, ಎಲ್ಲಾ ಸರ್ಕಾರಿ ಇಲಾಖೆಗಳು ಕ್ರಮ ಕೈಗೊಳ್ಳುವ ಅಗತ್ಯತೆ ಇರುತ್ತದೆ. ಆದಾಗ್ಯೂ, ವಾಹನಗಳಿಗೆ ವಿಮಾ ರಕ್ಷೆ ಅವಧಿ ಮುಗಿದ ನಂತರ ಅದನ್ನು ನವೀಕರಿಸಲು ಅದಕ್ಕೆ ಪಾವತಿಸಬೇಕಾಗಿರುವ ಹಣವನ್ನು ಪಾವತಿಸದೇ ಇದ್ದಲ್ಲಿ, ಇಂತಹ ವಾಹನಗಳಿಗೆ ವಿಮಾ ರಕ್ಷೆ ಲಭ್ಯವಾಗುವುದಿಲ್ಲ. ವಿಮಾ ಅವಧಿ ಮುಗಿಯುವ ಪೂರ್ವದಲ್ಲಿ ಸರ್ಕಾರಿ ವಿಮಾ ವಿಮಾನ ಇಲಾಖೆ ನಿಗಧಿಪಡಿಸಿರುವ ವಿಮಾ ಮೊತ್ತವನ್ನು ಅವರಿಂದ ತಿಳಿದುಕೊಂಡು, ಅದನ್ನು ಪಾವತಿಸುವುದು ಆಯಾ ಇಲಾಖಾ ಮುಖ್ಯಸ್ಥರ ಕರ್ತವ್ಯವಾಗಿರುತ್ತದೆ. ಸರ್ಕಾರಿ ವಾಹನಕ್ಕೆ ವಿಮಾ ರಕ್ಷೆ ಇಲ್ಲದೇ ಇದ್ದಲ್ಲಿ, ಅಂತಹ ಅವಧಿಯಲ್ಲಿ ಅಪಘಾತ ಸಂಭವಿಸಿದ್ದಲ್ಲಿ ವಾಹನ ಅಪಘಾತ ಪರಿಹಾರ ಮಂಡಳಿ ನೀಡುವ ಪರಿಹಾರ ಮೊತ್ತವನ್ನು ಸರ್ಕಾರದಿಂದಲೇ ಪಾವತಿಸಬೇಕಾಗಿರುತ್ತದೆ. ಇಂತಹ ಪ್ರಸಂಗವನ್ನು ತಡೆಯುವುದಕೋಸ್ಕರ ಆಯಾ ಕಛೇರಿ ಮುಖ್ಯಸ್ಥರು ತಾವು ಉಪಯೋಗಿಸುತ್ತಿರುವ ವಾಹನಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ಮುಖಾಂತರ ವಿಮಾ ರಕ್ಷೆ ಅವಧಿ ಮುಗಿಯುವ ಮೊದಲೇ ವಿಮಾ ರಕ್ಷೆಯನ್ನು ಪಡೆಯಬೇಕೆಂದು ಮತ್ತೊಮ್ಮೆ ಈ ಮೂಲಕ ಸೂಚಿಸಿದೆ.

2. ಇಲಾಖಾ ಮುಖ್ಯಸ್ಥರು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಾಹನಗಳಿಗೆ ಸರ್ಕಾರಿ ವಿಮಾ ಇಲಾಖೆಯ ಮೂಲಕ ವಿಮಾ ರಕ್ಷೆ ಪಡೆಯಲಾಗಿದೆಯೇ ಎಂದು ಖಾತ್ರಿ ಪಡಿಸಿಕೊಳ್ಳತಕ್ಕದ್ದು. ಒಂದು ವೇಳೆ, ವಿಮಾ ರಕ್ಷೆ ಪಡೆಯದೇ ಇದ್ದಲ್ಲಿ, ವಿಮಾ ರಕ್ಷೆ ಇಲ್ಲದ ಅವಧಿಯಲ್ಲಿ ಅಪಘಾತ ಸಂಭವಿಸಿದಲ್ಲಿ, ಆಯಾ ಕಛೇರಿಯ ಮುಖ್ಯಸ್ಥರೇ ಜವಾಬ್ದಾರರಾಗಿರುತ್ತಾರೆ ಮತ್ತು ಇಂತಹವರ ವಿರುದ್ಧ ಇಲಾಖಾ ವಿಚಾರಣೆಯನ್ನು ಸಹ ಕೈಗೊಳ್ಳಲಾಗುವುದು ಎಂದು ಮತ್ತೊಮ್ಮೆ ತಿಳಿಸಿದೆ. ಆದ್ದರಿಂದ, ಆಯಾ ಕಛೇರಿ ಮುಖ್ಯಸ್ಥರು ಮತ್ತು ವಾಹನವನ್ನು ಉಪಯೋಗಿಸುತ್ತಿರುವ ಅಧಿಕಾರಿಗಳು, ಕಾಲಕಾಲಕ್ಕೆ ತಮ್ಮ ವಾಹನಕ್ಕೆ ವಿಮಾ ರಕ್ಷೆ ಇರುವುದನ್ನು ಖಾತ್ರಿ ಪಡಿಸಿಕೊಂಡು, ವಿಮಾ ರಕ್ಷೆ ಅವಧಿ ಮುಗಿಯುವ ಮೊದಲೇ ವಿಮಾ ಪಾಲಿಸಿಯನ್ನು ಪಡೆದುಕೊಳ್ಳಲು ಮತ್ತೊಮ್ಮೆ ಸೂಚಿಸಿದೆ.

ಸಹಿ/-
(ಎಸ್.ವಿ. ರಂಗನಾಥ್),
ಸರ್ಕಾರದ ಮುಖ್ಯ ಕಾರ್ಯದರ್ಶಿ

ಸಂ:ಉತಇ/ತರಬೇತಿ/ಆಡಳಿತ-15/ವಿವ-05/12-13.
ದಿನಾಂಕ: 31-07-2012.

ಸರ್ಕಾರಿ ಅಧಿಸೂಚನೆ ಸಂಖ್ಯೆ: ಸಿಆಸುಇ 15 ಶಿವಾನೀ. 2012 ದಿ: 02-07-2012, ರ ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ನೀಡಲಾಗಿದೆ.

ಸಹಾಯಕ ನಿರ್ದೇಶಕರು (ಆಡಳಿತ),
ಉದ್ಯೋಗ ಮತ್ತು ತರಬೇತಿ.

ಗೆ,

1) ರಾಜ್ಯದಲ್ಲಿರುವ ಎಲ್ಲಾ 4 ವಿಭಾಗೀಯ ಕಛೇರಿಗಳು, ಸ್ಟಾರ್ಕ್ ಮಳವಳ್ಳಿ/ಐಟಿಡಬ್ಲ್ಯೂ ದಾವಣಗೆರೆ ಹಾಗೂ ಉದ್ಯೋಗ ವಿಭಾಗದ ಮಾಹಿತಿಗೆ ಹಾಗೂ ಮುಂದಿನ ಕ್ರಮಕ್ಕಾಗಿ
2) ಉಪ ನಿರ್ದೇಶಕರು (ತರಬೇತಿ), ನಿರ್ದೇಶನಾಲಯ
3) ಎಲ್ಲಾ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ
4) ಸಹಾಯಕ ನಿರ್ದೇಶಕರು (ಲೆಕ್ಕಪತ್ರ), ನಿರ್ದೇಶನಾಲಯ 4) ಆಡಳಿತಾಧಿಕಾರಿಗಳು, ನಿರ್ದೇಶನಾಲಯ (5) ಕಛೇರಿ ಪ್ರತಿ.